149-6
72-(89)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ಪ್ರಶ್ನೆ:

ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ವತಿಯಿಂದ ಸಾರ್ವಜನಿಕರಿಗೆ ಹಂಚಿಕೆಯಾದ ನಿವೇಶನಗಳನ್ನು ಸಾಮಾನ್ಯವಾಗಿ ಕೆಲವೊಂದು ಷರತ್ತುಗಳನ್ನು ಪೂರೈಸಿದ ನಂತರ 10 ವರ್ಷಗಳ ನಂತರ ಹಂಚಿಕೆದಾರರಿಗೆ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡಲಾಗುವುದು. ಆದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಳೆದ 17 ವರ್ಷದ ಹಿಂದೆ ಸಾರ್ವಜನಿಕರಿಗೆ ಹಂಚಿಕೆಯಾಗಿದ್ದು, ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಪೂರೈಸಿದ್ದರೂ ಸಹಾ, ಪ್ರಾಧಿಕಾರದ ವತಿಯಿಂದ ಹಂಚಿಕೆದಾರರಿಗೆ ಇನ್ನೂ ಕ್ರಯಪತ್ರವನ್ನು ನೊಂದಣಿಯನ್ನು ಮಾಡದಿರುವುದರಿಂದ ಹಂಚಿಕೆದಾರರು ಆತಂಕಕ್ಕೆ ಒಳಗಾಗಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಲಾಲ್ ಬಹದ್ದೂರ್ ಶಾಸ್ತ್ರೀ ನಗರ, ವಸಂತ ನಗರ, ಆರ್.ಟಿ. ನಗರ, ಶಾಂತವೇರಿ ಗೋಪಾಲಗೌಡ ನಗರ, ಲಲಿತಾದ್ರಿ ನಗರ, ಹಂಚ ಸಾತಗಳ್ಳಿ, ಆಲನಹಳ್ಳಿ ಗಳಲ್ಲಿನ ಬಡಾವಣೆಗಳಲ್ಲಿ ನಿರ್ಮಾಣವಾದ ಅರ್ಜಿದಾರರಿಗೆ ಕೆಲವೊಂದು ಷರತ್ತುಗಳಾದ; ನಿವೇಶನವನ್ನು ಸ್ವಾಧೀನಕ್ಕೆ ತೆದುಕೊಂಡು ಹತ್ತು ವರ್ಷಗಳಾಗಿರಬೇಕು, ನಿವೇಶನದ ಶೇಕಡ 60 ರಷ್ಟು ಬಿಲ್ಟಪ್ ಏರಿಯಾದಲ್ಲಿ ಮನೆಯನ್ನು ಕಟ್ಟಿಕೊಡಿರಬೇಕು ಎಂಬ ಷರತ್ತುಗಳನ್ನು ವಿಧಿಸಿದ್ದಾರೆ.

ಈ ರೀತಿಯ ಷರತ್ತುಗಳನ್ನು ವಿಧಿಸಿರುವುದರಿಂದ ಹಂಚಿಕೆದಾರರು ಸಂಕಷ್ಟಕ್ಕೆ ಸಿಲುಕಿಕೊಂಡು, ಚಿಂತಾಕ್ರಾಂತರಾಗಿರುತ್ತಾರೆ. ಸುಮಾರು 17 ವರ್ಷಗಳ ಹಿಂದೆ ಇದ್ದ ಪರಿಸ್ಥಿತಿಯು ಪ್ರಸ್ತುತ ಹಂಚಿಕೆಯಾದರವರಿಗೆ ವಯಸ್ಸಾಗಿರುವುದರಿಂದ ಅವರ ಮನೆಯ ಜವಾಬ್ದಾರಿಗಳು ಹೆಚ್ಚಿದ್ದು, ಆರೋಗ್ಯದಲ್ಲಿ ಏರುಪೇರುಗಳಾಗಿದ್ದು ಇದನ್ನು ನಿಭಾಯಿಸುವುದೇ ಅವರ ಸವಾಲುಗಳಾಗಿರುತ್ತದೆ. ಆದುದರಿಂದ, ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಿ, ಹಂಚಿಕೆದಾರಲಿಗೆ ಕ್ರಯಪತ್ರವನ್ನು ನೀಡಿ ನಿವೇಶನವನ್ನು ನೊಂದಣಿ ಮಾಡಿಕೊಡುವ ಬಗ್ಗೆ.

*****

ಉತ್ತರ:

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991ರ ನಿಯಮ 19(6)ರನ್ವಯ ಹಂಚಿಕೆದಾರರು 5 ವರ್ಷಗಳೊಳಗಾಗಿ ಅಥವಾ ಪ್ರಾಧಿಕಾರದಿಂದ ಅನುಮತಿ ಕೋರಿ ಹೆಚ್ಚಿನ ಕಾಲಾವಕಾಶ ಪಡೆದುಕೊಂಡಿರುವ ಅವಧಿಯೊಳಗೆ ಮನೆ ನಿರ್ಮಿಸಬೇಕಿದ್ದು, ಇಲ್ಲದಿದ್ದಲ್ಲಿ ಪ್ರಾಧಿಕಾರವು ನೋಟೀಸ್ ನೀಡಿ, ನಿಯಮಾನುಸಾರ ಕ್ರಮ ಕೈಗೊಂಡು ಹಂಚಿಕೆಯನ್ನು ರದ್ದುಪಡಿಸಬೇಕಿರುತ್ತದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991ರ ನಿಯಮ 19(7)ರನ್ವಯ ಗುತ್ತಿಗೆ ಕರಾರು ಪತ್ರ ಮಾಡಿಕೊಂಡ 10 ವರ್ಷಗಳು ಕಳೆದ ನಂತರ ಹಂಚಿಕೆಯನ್ನು ರದ್ದುಪಡಿಸದಿದ್ದಲ್ಲಿ ಪ್ರಾಧಿಕಾರವು ಹಂಚಿಕೆದಾರರಿಗೆ ಕ್ರಯಪತ್ರವನ್ನು ಮಾಡಿಕೊಡಬೇಕಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 165 ಬೆಮಪ್ರಾ 2012, ದಿನಾಂಕ: 20.03.2013 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ತಿದ್ದುಪಡಿ ನಿಯಮಗಳು, 2012 ನ್ನು ಅಧಿಸೂಚಿಸಲಾಗಿದ್ದು, ಇದರಲ್ಲಿ ನಿಯಮ (20) ಕ್ಕೆ ಒಂದು ಬಾರಿಯ ಕ್ರಮವಾಗಿ ತಿದ್ದುಪಡಿ ತರಲಾಗಿದ್ದು, ನಿಯಮಗಳು ಜಾರಿಗೆ ಬಂದ ದಿನಾಂಕದಿಂದ 2005ರ ಪೂರ್ವದಲ್ಲಿ ಹಂಚಿಕೆಯಾದ ನಿವೇಶನಗಳಿಗೆ

ಮಾತ್ರ ಅನ್ವಯಿಸುತ್ತದೆ. ಸದರಿ ತಿದ್ದುಪಡಿ ನಿಯಮಗಳಲ್ಲಿ ಹಂಚಿಕೆದಾರರು 10 ವರ್ಷದ ಗುತ್ತಿಗೆ ಅವಧಿಯೊಳಗೆ ಅಥವಾ ಪೂರ್ಣಗೊಂಡ ನಂತರ ಮನೆಯನ್ನು ನಿರ್ಮಿಸಿ/ನಿರ್ಮಿಸದೇ ಕ್ರಯ ಪತ್ರ ಪಡೆಯದೇ ನೇರ ಮಾರಾಟ ಮಾಡಿರುವ ಪ್ರಕರಣಗಳಲ್ಲಿ ನೋಂದಣಿ ಬೆಲೆಯ ಶೇ 25ರಷ್ಟು ದಂಡ ಶುಲ್ಕವನ್ನು ಪಾವತಿಸಿಕೊಂಡು ಕ್ರಯಪತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ.

2005ನೇ ಸಾಲಿನಲ್ಲಿ ಹಾಗೂ ನಂತರದ ಅವಧಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿ 10 ವರ್ಷ ಪೂರ್ಣಗೊಂಡ ನಿವೇಶನಗಳ ಹಂಚಿಕೆದಾರರ ನಿವೇಶನಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 165 ಬೆಮಪ್ರಾ 2012, ದಿನಾಂಕ: 20.03.2013 ರ ಅಂಶಗಳನ್ವಯ ಕ್ರಯಪತ್ರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

---

**ನಅಇ 57 ಮೈಅಪ್ರಾ 2023**

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು